ವಿಜಯಮ್ಮನಿಗೆ ಆಗ ತಾನೇ ಜೋಂಪು ಹತ್ತಿತ್ತು. ಅಪೂರ್ವ ಎದ್ದು ಕುಳಿತು, ಸದ್ದು ಮಾಡದೇ ಕೋಣೆಯಿಂದ ಹೊರ ಬಂದಳು. ರಾಯರ ಕೋಣೆಯೊಳಗೊಮ್ಮೆ ಅನುಮಾನದಿಂದ ಇಣುಕಿ ನೋಡಿದಾಗ, ರಾಯರು ಎದೆಯನ್ನು ಒತ್ತಿ ಹಿಡಿದು ಮುಖ ಕಿವುಚಿಕೊಂಡು ನೋವಿನಿಂದ ಮುಲುಗುತ್ತಿದ್ದರು. ಅವರ ಹಣೆ ಬೆವರಿನಿಂದ ತೋಯ್ದು ಹೋಗಿತ್ತು.

'ಅಂಕಲ್..ಏನಾಯ್ತು..ಯಾಕೆ ಹೀಗಿದ್ದೀರಾ..?' ಅಪೂರ್ವ ಆತಂಕದಿಂದ ಕಂಪಿಸುತ್ತ ಪ್ರಶ್ನಿಸಿದಾಗ ರಾಯರು ನೋವಿನಿಂದ ಒದ್ದಾಡುತ್ತ ಏಳಲೂ ಆಗದೆ ಕುಳಿತುಕೊಳ್ಳಲೂ ಆಗದೆ ಚಡಪಡಿಸಿದರು.

ಅಪೂರ್ವ ಒಂದೇ ಉಸಿರಿಗೆ ವಿಜಯಮ್ಮನನ್ನು ಎಬ್ಬಿಸಿ ಕರೆ ತಂದಳು. ಪತಿಯ ಅವಸ್ಥೆ ಕಂಡು ಅವರೂ ಧೃತಿಗೆಟ್ಟರು. 'ಅಪೂರ್ವ..ಏನ್ಮಾಡೋದು..? ನನ್ಗೆ ಕೈಕಾಲು ಆಡ್ತಿಲ್ಲ..ಆಸ್ಪತ್ರೆಗೆ ಕರ್ಕೊಂಡು ಹೋಗೋಣ್ವಾ..?'

'ಹೇಗೆ ಆಂಟಿ..ಈ ಹೊತ್ತಿನಲ್ಲಿ ಆಟೊ ಸಿಗಲ್ಲ..ನನ್ಗೆ ಕಾರು ಬಿಡಲು ಬರಲ್ಲ..ಆಂಬುಲೆನ್ಸ್‌ಗೆ ಫೋನ್ ಮಾಡ್ತೀನಿ..' ಎಂದವಳೇ ತನ್ನ ಮೊಬೈಲ್‌ನಿಂದ ಆಂಬುಲೆನ್ಸ್‌ಗೆ ಕರೆ ಮಾಡಿದಳು.

ಅರ್ಧ ತಾಸಿನೊಳಗೆ ಮನೆ ಮುಂದೆ ಆಂಬುಲೆನ್ಸ್ ಬಂದು ನಿಂತಿತು. ಮನೆಗೆ ಬೀಗ ಜಡಿದು ಇಬ್ಬರೂ ಅದೇ ಆಂಬುಲೆನ್ಸ್‌ನಲ್ಲಿ ಕುಳಿತು ಆಸ್ಪತ್ರೆಯತ್ತ ಹೊರಟರು. ಆ ಹೊತ್ತಿನಲ್ಲಿ ಓ.ಪಿ.ಡಿ.ಯಲ್ಲಿ ಬರೀ ಡ್ಯೂಟಿ ಡಾಕ್ಟರ್‌ಗಳು ಮಾತ್ರ ಇದ್ದರು. ರಾಯರ ಪರಿಸ್ಥಿತಿ ಅರಿತು ಕೂಡಲೇ ಹಿರಿಯ ತಜ್ಞರಿಗೆ ಕರೆ ಮಾಡಿದ ಮೇಲೆ ರಾಯರಿಗೆ ಪ್ರಥಮ ಚಿಕಿತ್ಸೆಯನ್ನು ಶುರು ಮಾಡಿದರು. ಹೃದಯ ತಜ್ಞರ ಆಗಮನವಾಗಿ, ರಾಯರನ್ನು ಪರೀಕ್ಷೆಗೊಳಪಡಿಸಿದ ಬಳಿಕ ಲಘು ಹೃದಯಾಘಾತವಾಗಿರುವುದನ್ನು ಅರಿತು ಕೂಡಲೇ ಐ.ಸಿ.ಯು.ಗೆ ವರ್ಗಾಯಿಸಲಾಯಿತು. ವಿಜಯಮ್ಮನವರಂತೂ ಭೂಮಿಗಿಳಿದು ಹೋಗಿದ್ದರು. 'ಯಾವತ್ತೂ ಮಾತನಾಡದ ನಾನು..ಇವತ್ತು ಬಾಯಿಗೆ ಬಂದ ಹಾಗೆ ಮಾತನಾಡಿದೆ..ಅವ್ರನ್ನ ಇಂಥ ಸ್ಥಿತಿಗೆ ತರಲು ನಾನೇ ಕಾರಣ..' ವಿಜಯಮ್ಮ ಐ.ಸಿ.ಯು.ನ ಹೊರಗೆ ಇದ್ದ ಬೆಂಚಿನಲ್ಲಿ ಕುಳಿತು ಅಪೂರ್ವಳ ಮುಂದೆ ಪ್ರಲಾಪಿಸಿದರು.

'ಮಗ ನೋಡಿದ್ರೆ ಜೈಲಿನಲ್ಲಿ..ಪತಿ ನೋಡಿದ್ರೆ ಆಸ್ಪತ್ರೆಯಲ್ಲಿ..ನಾನು ಏನು ಮಾಡಲಿ..?' ದಿಕ್ಕು ಕಾಣದೆ ವಿಜಯಮ್ಮ ತಲ್ಲಣಿಸಿ ಹೋಗಿದ್ದರು.

'ಇದು ಧೈರ್ಯ ಕಳ್ಕೊಳ್ಳುವ ಸಮಯವಲ್ಲ ಆಂಟಿ..ಅಂಕಲ್ ತೀವ್ರ ನಿಗಾ ಕೊಠಡಿಯಲ್ಲಿದ್ದಾರೆ..ಪ್ರತಿ ಕ್ಷಣ ಅವರ ಯೋಗಕ್ಷೇಮವನ್ನು ಪರಿಶೀಲಿಸ್ತಾ ಇದ್ದಾರೆ..ಅಂಕಲ್‌ಗೆ ಏನೂ ಆಗಲ್ಲ..ನೀವು ಧೃತಿಗೆಡಬೇಡಿ..' ಅವರ ಅಂಗೈಯೊತ್ತಿ ಅಪೂರ್ವ ಧೈರ್ಯ ತುಂಬಲೆತ್ನಿಸಿದಳು.

'ನೀನು ನನ್ಜೊತೆ ಇರೋ ಹೊತ್ತಿಗೆ ನನಗೆಷ್ಟೋ ಧೈರ್ಯ.. ಬೆಂಬಲ.. ನಾನೊಬ್ಬೇ ಇದ್ದಿದ್ದರೆ ಕೈಕಾಲು ಆಡ್ತಿರಲಿಲ್ಲ. ನಿನ್ನ ಉಪಕಾರ ನಾನು ಜೀವನ ಪೂರ್ತಿ ಮರೆಯಲ್ಲ ಅಪೂರ್ವ..' ಕೃತಜ್ಞತೆಯಿಂದ ನುಡಿದರು.

'ನಾನೇನು ಮಹಾ ಮಾಡಿರೋದು..? ನೀವು ನನ್ಗೆ ಮಾಡಿರೋ ಉಪಕಾರದ ಮುಂದೆ ಇದೇನು ದೊಡ್ಡದಾ..ಬಿಡಿ..ಆಂಟಿ..'

'ಇಲ್ಲಾ ಅಪೂರ್ವ ನಿನ್ಗೆ ಗೊತ್ತಿಲ್ಲ..' ಎಂದು ಏನೋ ಹೇಳ ಹೊರಟ ವಿಜಯಮ್ಮನನ್ನು ತಡೆದಳು,'ಈಗ ಯಾಕೆ ಆ ಮಾತು..? ನಾವು ಇಲ್ಲಿ ಇರೋ ಹಾಗಿಲ್ವಂತೆ..ಮನೇಗೆ ಹೋಗಿ ಬೆಳಿಗ್ಗೆ ಬನ್ನಿ ಅಂತ ಹೇಳ್ತಿದ್ದಾರೆ..ಏನು ಮಾಡೋದು..?'

'ಇವ್ರನ್ನ ಇಂಥ ಸ್ಥಿತಿಯಲ್ಲಿ ಬಿಟ್ಟು..ಈಗ ಮನೆಗೆ ಹೋಗಲು ಹೇಗೆ ಮನಸ್ಸಾಗುತ್ತೆ..? ಇವ್ರು ಸರಿಯಾಗಿ ಮಾತನಾಡಿಸುವ ತನಕ ನಾನು ಆಸ್ಪತ್ರೆ ಬಿಟ್ಟು ಎಲ್ಲೂ ಬರಲ್ಲ..' ವಿಜಯಮ್ಮ ಖಡಾಖಂಡಿತವಾಗಿ ನುಡಿದರು.

'ನೀನು ಬೇಕಾದ್ರೆ ಮನೇಗೆ ಹೋಗು..ನಿನ್ಗೆ ಕಾಲೇಜು ಇದ್ಯಲ್ವಾ..ನಿನ್ನ ತರಗತಿಗಳು ತಪ್ಪಿ ಹೋಗುತ್ತಲ್ಲಾ..' ಎಂದರು.

'ನಿಮ್ಗಿಂತಾ ನನಗೆ ತರಗತಿಗಳೇನೂ ಮುಖ್ಯವಲ್ಲ..ಅಂಕಲ್ ಆರೋಗ್ಯ ಸರಿ ಹೋಗುವ ತನಕ ನಾನೂ ಕಾಲೇಜಿಗೆ ಹೋಗುವುದಿಲ್ಲ..' ಅಪೂರ್ವ ನಿರ್ಧರಿಸಿದವಳಂತೆ ನುಡಿದಾಗ ತಮ್ಮ ನೋವಿನಲ್ಲೂ ಅವಳ ಮೇಲೆ ಅಭಿಮಾನದಿಂದ ಅವಳ ತಲೆದಡವಿದರು.

ಮರುದಿನ ಬೆಳಿಗ್ಗೆ ಇಬ್ಬರೂ ತೀರ್ಮಾನಿಸಿಕೊಂಡು ಆಸ್ಪತ್ರೆಯಲ್ಲೇ ರೂಂ ಬುಕ್ ಮಾಡಿದರು. ರಾಯರು ಚೇತರಿಸಿಕೊಂಡ ಬಳಿಕ ಒಂದು ದಿನ ಆಸ್ಪತ್ರೆಯಲ್ಲೇ ಉಳಿದು ಪರಿಶೀಲನೆಯಲ್ಲಿರಿಸಿ ನಂತರ ಮನೆಗೆ ಕಳಿಸಿ ಕೊಡುವುದಾಗಿ ವೈದ್ಯರು ಹೇಳಿದ್ದರು. ಇಬ್ಬರೂ ಅದೇ ಕೋಣೆಯಲ್ಲಿದ್ದು ಹೊತ್ತು ಕಳೆದರು. ಐ.ಸಿ.ಯು.ನಿಂದ ಕರೆ ಬಂದಾಗ ಹೋಗಿ ಫಾರ್ಮಸಿಯಿಂದ ಮದ್ದು ತಂದುಕೊಡಬೇಕಾಗಿತ್ತು. ಉಳಿದ ಹೊತ್ತು ರೂಮಿನಲ್ಲೇ ಇಬ್ಬರೂ ಕುಳಿತು ಐ.ಸಿ.ಯು.ನಿಂದ ಬರುವ ಕರೆಗಾಗಿ ಕಾಯುತ್ತ ಕುಳಿತಿರಬೇಕಾಗಿತ್ತು.

ರಾಯರು ಮಧ್ಯಾಹ್ನದ ಹೊತ್ತಿಗೆ ಚೇತರಿಸಿಕೊಂಡರು. ಆಸ್ಪತ್ರೆಗೆ ಅವರನ್ನು ಸೇರಿಸುವ ಧಾವಂತದಲ್ಲಿ ಬಟ್ಟೆಬರೆಗಳೇನನ್ನೂ ತಂದಿರಲಿಲ್ಲ.

'ನೀನು ಮನೇಗೆ ಹೋಗಿ ಅಗತ್ಯ ಸಾಮಾನುಗಳನ್ನು ತಗೊಂಡ್ಬಾ..' ವಿಜಯಮ್ಮ ಅಪೂರ್ವಳನ್ನು ಮನೆಗೆ ಕಳಿಸಿ ಕೊಟ್ಟರು.

ತಟ್ಟೆ, ಲೋಟ, ಬೈರಾಸು, ಉಡುಪುಗಳು ಅಗತ್ಯವಿದ್ದರಿಂದ ಅವನ್ನು ತರಲೆಂದು ಮನೆಗೆ ಹೊರಟಳು. ಈ ಎರಡು ದಿನಗಳಲ್ಲಿ ನಡೆದ ಸಂಗತಿಗಳು ಅವಳನ್ನು ಕಂಗೆಡಿಸಿ ಬಿಟ್ಟಿತ್ತು. ದೇವಸ್ಥಾನದಲ್ಲಿ ಸೂರ್ಯನನ್ನು ಕಂಡಿದ್ದು, ಅವನು ನೇರವಾಗಿ ಮನೆಗೆ ಬಂದಿದ್ದು, ರಾಯರು ಮನೆ ಬಿಟ್ಟು ಹೋಗಿದ್ದು, ಪೋಲಿಸರು ಬಂದು ಸೂರ್ಯನನ್ನು ಕರೆದೊಯ್ದದ್ದು, ತಾನು ಮೊದಲ ಬಾರಿ ಸ್ಟೇಶನ್ ಮೆಟ್ಟಿಲು ಹತ್ತಿದ್ದು, ಈಗ ರಾಯರ ಹೃದಯಾಘಾತ..! ಬಿರುಗಾಳಿಯೊಂದು ಬೀಸಿ ಬಂದು ಎಲ್ಲವನ್ನೂ ಬುಡಮೇಲು ಮಾಡುವಂತೆ, ಸೂರ್ಯನ ಆಗಮನ ಈ ಮನೆಗೆ ಬಿರುಗಾಳಿಯನ್ನೇ ಹೊತ್ತು ತಂದಿದೆ..ಇನ್ನು ಮುಂದಕ್ಕೆ ಏನೇನು ಕಾದಿದೆಯೋ..? ಎಂಬ ಚಿಂತೆ ಅಪೂರ್ವಳನ್ನು ಮುತ್ತಿಕೊಂಡಿತು.

ಮನೆಗೆ ಬಂದವಳೇ ವಸುಮತಿ ಚಿಕ್ಕಮ್ಮನಿಗೆ ಕರೆ ಮಾಡಿ ನಡೆದ ಸಂಗತಿಗಳನ್ನು ವಿವರಿಸಿದಾಗ, ಆಕೆ ತಾವು ಮರುದಿನವೇ ಹೊರಟು ಬರುವುದಾಗಿ ತಿಳಿಸಿದರು.

'ಆ ಸೂರ್ಯ ಇದೇ ಮನೇಲಿ ಇದ್ರೆ ..ನನಗೆ ಇಲ್ಲಿ ಇರೋದಿಕ್ಕೆ ಕಷ್ಟವಾಗುತ್ತೆ ಚಿಕ್ಕಮ್ಮ..ನಾನೇನು ಮಾಡಲಿ..?' ತನ್ನ ಅಸಹಾಯಕತೆ ತೋಡಿಕೊಂಡಳು.

'ಈಗ ಏನೂ ಮಾತನಾಡಬೇಡ..ರಾಯರು ಗುಣಮುಖರಾದ್ಮೇಲೆ..ಏನು ಮಾಡೋದು ಅಂತ ಅವ್ರನ್ನೇ ಕೇಳೋಣ.. ಇಷ್ಟು ದಿನ ನಿನ್ನ ತಮ್ಮ ಮನೇಲಿ ಇಟ್ಕೊಂಡು ನಿನ್ಗೆ ಅನ್ನ ಹಾಕಿದ್ದಾರೆ..ಅವ್ರಿಗೇನು ನಾವು ಮಾಡಿದ್ರೂ ಕಮ್ಮೀನೇ.'

'ನೀವು ಹೇಳೋದು ಸರಿ ಚಿಕ್ಕಮ್ಮಾ..ಅಂಕಲ್ ಸರಿ ಹೋದ್ಮೇಲೆ..ಆ ಸೂರ್ಯನೂ ಇದೇ ಮನೇಲಿದ್ರೆ ನಾನಂತೂ ಈ ಮನೇಲಿರೋಕ್ಕೆ ಸಾಧ್ಯವಿಲ್ಲ..' ಅಪೂರ್ವ ನುಡಿದು ಫೋನ್ ಇಟ್ಟಳು.

ಅಡುಗೆ ಮನೆಯಲ್ಲಿ, ಹಿಂದಿನ ದಿನ ಬಿಟ್ಟು ಹೋಗಿದ್ದ ಕೆಲಸಗಳನ್ನು ಪೂರ್ಣಗೊಳಿಸಿ, ವಿಜಯಮ್ಮ ಹೇಳಿದ ವಸ್ತುಗಳನ್ನೆಲ್ಲಾ ಜೋಡಿಸಿಟ್ಟು ಕೊಂಡಳು. ಸ್ನಾನ ಮುಗಿಸಿ ಆಸ್ಪತ್ರೆಗೆ ಹೋಗಲು ಅಣಿಯಾಗುವ ಹೊತ್ತಿಗೆ ಕರೆಗಂಟೆ ಸದ್ದಾಗಿತ್ತು. ಬಾಗಿಲು ತೆರೆದ ಅಪೂರ್ವಳ ಮುಖ ಅಲ್ಲಿ ನಿಂತಿದ್ದ ವ್ಯಕ್ತಿಯನ್ನು ಕಂಡು ಬಿಳಿಚಿಹೋಯಿತು. ಅಲ್ಲಿ ಸೂರ್ಯ ನಿಂತಿದ್ದ..!

ಅವನನ್ನು ಒಳಗೆ ಸೇರಿಸಬೇಕೋ, ಬೇಡವೋ ತೋಚದೇ ಹಾಗೇ ದ್ವಂದ್ವ ಭಾವದಲ್ಲಿ ನಿಂತಳು.

'ದಾರಿ ಬಿಡು..ಅಡ್ಡ ಯಾಕೆ ನಿಂತಿದ್ದೀಯಾ..?' ಒಳಗೆ ಬರಲು ಹವಣಿಸುತ್ತ ಗಡುಸಾಗಿ ಪ್ರಶ್ನಿಸಿದ.

'ಮನೇಲಿ ಯಾರೂ ಇಲ್ಲ..ನಾನು ಹೊರಗಡೆ ಹೋಗ್ತಾ ಇದ್ದೀನಿ..' ಎಂದಳು.

'ಎಲ್ಲಿ ಹಾಳಾಗಿ ಹೋಗಿದ್ದಾರೆ..? ಜೈಲಿನಲ್ಲಿದ್ದಾಗಲಂತೂ ನನ್ನ ನೋಡಲು ಯಾರೂ ಬರ್ತಾ ಇರಲಿಲ್ಲ..ಈಗ ಪೋಲಿಸ್ ಸ್ಟೇಶನ್‌ಗೂ ಯಾರೂ ಬರಲಿಲ್ಲ.. ಪುಣ್ಯಕ್ಕೆ ಆ ಕಳ್ಳತನದಲ್ಲಿ ನಾನು ಭಾಗಿಯಾಗಿಲ್ಲ ಅಂತ ಗೊತ್ತಾಗಿ ನನ್ನ ಬಿಟ್ಟಿಟ್ರು.. ಇಲ್ದಿದ್ರೆ ನಾನು ಅಲ್ಲೇ ಕೊಳೆಯಬೇಕಾಗಿತ್ತೇ ಹೊರತು ನನ್ನಪ್ಪ, ಅಮ್ಮ ಬಂದು ನನ್ನನ್ನು ಬಿಡಿಸ್ತಾ ಇರಲಿಲ್ಲ ಅನ್ನು..ಇದನ್ನೆಲ್ಲಾ ನಾನು, ಈ ಮನೆಗೆ ಸಂಬಂಧಿಸದ ನಿನ್ನ ಮುಂದೆ ಯಾಕೆ ಹೇಳ್ತಾ ಇದ್ದೀನಿ..ಇದು ನನ್ನ ಮನೆ.. ನೀನು ಹೊರಗಿನವಳು..' ಅವನು ಪದೇ ಪದೇ ತನ್ನನ್ನು ಹಾಗೆ ಹಂಗಿಸುತ್ತಿದ್ದದು ಅವಳಿಗೆ ಸೈರಣೆಯಾಗಲಿಲ್ಲ.

'ನಾನು ಹೊರಗಿನವಳು ಅಂತ ಪದೇ ಪದೇ ಹಂಗಿಸುವ ಅಗತ್ಯ ಇಲ್ಲ..ನನ್ಗೆ ನನ್ನ ಸ್ಥಿತಿಯ ಅರಿವಿದೆ.. ಮನೆಯವರಾಗಿ ನೀವು ನಿಮ್ಮ ಹೆತ್ತವರಿಗೆ ಏನು